## ಕನ್ನಡ ಅಭಿವೃದ್ಧಿ ಪ್ರಾಧಿಕಾರ

## ಕನ್ನಡ ಕಾರ್ಮಿಕರ ಸಮಾವೇಶ

# ಕನ್ನಡ ಕಾರ್ಮಿಕರ ಬೇಡಿಕೆಗಳ ಮನವಿ ಪತ್ರ

೧. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದ್ಯಮಗಳಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಖಾಸಗೀ ವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಈ ಸಂಗತಿಯನ್ನು ಪರಿಗಣಿಸಿ ಡಾ. ಸರೋಜಿನಿ ಮಹಿಷಿ ವರದಿಯನ್ನು ಇಂದಿನ ಕಾಲಮಾನಕ್ಕೆ ಅನ್ವಯವಾಗುವ ರೀತಿಯಲ್ಲಿ ಮಾರ್ಪಡಿಸಿ, ಐ.ಟಿ/ಬಿಟಿ ಬಹುರಾಷ್ಟ್ರೀಯ ಕಂಪನಿಗಳೂ ಸೇರಿದಂತೆ ಎಲ್ಲಾ ಖಾಸಗೀ ಕೈಗಾರಿಕೆ, ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಶೇ ೭೫ ಪ್ರಮಾಣದ ಉದ್ಯೋಗಗಳನ್ನು ಮೀಸಲಿರಿಸಲು ಸೂಚಿಸಿ ರಾಜ್ಯ ಸರ್ಕಾರ ಆದೇಶಿಸಬೇಕು. ಸ್ಥಳೀಯರಿಗೆ ಉದ್ಯೋಗ ರಾಷ್ಟ್ರೀಯ ನೀತಿ ರೂಪಿಸಲು ಸದನದಲ್ಲಿ ನಿರ್ಣಯ ಕೈಗೊಳ್ಳಬೇಕು.

೨. ರಾಜ್ಯದಲ್ಲಿರುವ ಉದ್ಯಮ, ರಾಷ್ಟ್ರೀಕೃತ ಬ್ಯಾಂಕ್, ಕಛೇರಿಗಳು ಹುದ್ದೆಗಳನ್ನು ತುಂಬುವಾಗ ಕಡ್ಡಾಯವಾಗಿ ಪ್ರಮುಖ ಕನ್ನಡ ಪತ್ರಿಕೆಗಳಲ್ಲಿ ಜಾಹೀರಾತು ನೀಡಬೇಕು ಮತ್ತು ಸಾರ್ವಜನಿಕರೊಡನೆ ವ್ಯವಹರಿಸಬೇಕಾಗಿರುವುದರಿಂದ ಸ್ಥಳೀಯ ಭಾಷೆ ಕನ್ನಡ ಜ್ಞಾನ ಕಡ್ಡಾಯ ಎಂದು ಜಾಹೀರಾತಿನಲ್ಲಿ ಸೇರಿಸಬೇಕು.

೩. ಬಹುತೇಕ ಉದ್ಯಮಗಳಲ್ಲಿ ಖಾಯಂ ಉದ್ಯೋಗಿಗಳಿಗಿಂತ ದಿನಗೂಲಿ, ಗುತ್ತಿಗೆ ಕಾರ್ಮಿಕರೇ ಅಧಿಕವಾಗಿದ್ದಾರೆ. ಇಲ್ಲಿ ಯಾವುದೇ ನಿರ್ಬಂಧವಿಲ್ಲದಿರುವುದರಿಂದ ಪರಪ್ರಾಂತ್ಯದವರೇ ಹೆಚ್ಚು ಬರುತ್ತಿದ್ದಾರೆ. ಅದನ್ನು ತಪ್ಪಿಸಲು ಎಲ್ಲ ಕಾರ್ಮಿಕರ ನೋಂದಾವಣಿ, ನಿವಾಸ ಪ್ರಮಾಣ ಪತ್ರ, ಗುರುತಿನ ಚೀಟಿಗಳನ್ನು ಕಡ್ಡಾಯಗೊಳಿಸಬೇಕು ಹಾಗೂ ಕಡ್ಡಾಯವಾಗಿ ಕನ್ನಡಿಗರನ್ನೇ ನೇಮಿಸಬೇಕೆಂಬ ಷರತ್ತನ್ನು ವಿಧಿಸಬೇಕು. ಕಾರ್ಮಿಕ ಇಲಾಖೆ ಇದನ್ನು ಪರಿಶೀಲಿಸಿ ಗುತ್ತೇದಾರರ ಪರವಾನಗಿಯನ್ನು ನವೀಕರಿಸಬೇಕು.

೪. ಕೇಂದ್ರ ಸರ್ಕಾರ, ಖಾಸಗೀ ಉದ್ಯಮ ಕಛೇರಿಗಳಲ್ಲಿ ಬೇರೆ ರಾಜ್ಯದಲ್ಲಿರುವ ತಮ್ಮ ಶಾಖೆಗಳಿಂದ ಕಾರ್ಮಿಕರನ್ನು ವರ್ಗ ಮಾಡಿಕೊಂಡು ಕನ್ನಡಿಗರಿಗೆ ಸಿಗುವ ಉದ್ಯೋಗಾವಕಾಶವನ್ನು ವಂಚಿಸುತ್ತಿದ್ದಾರೆ. ಇದನ್ನು ತಪ್ಪಿಸಲು ವರ್ಗಾವಣೆಗೆ ಮುನ್ನ ಕಾರ್ಮಿಕ ಆಯುಕ್ತರ ಪೂರ್ವಾನುಮತಿ ಪಡೆಯುವಂತೆ ಆಜ್ಞೆ ಹೊರಡಿಸಬೇಕು.

೫. ಈಗ ಪರಿಶಿಷ್ಟರಿಗೆ ಸೂಕ್ತ ಪಾಲು ದೊರಕಿಸಿಕೊಡಲು ಬ್ಯಾಕ್‌ಲಾಗ್ ಹುದ್ದೆ ಸೃಷ್ಟಿಸಿರುವಂತೆ ಕನ್ನಡಿಗರಿಗೂ ನಿಗದಿತ ಪ್ರಮಾಣದ ಉದ್ಯೋಗ ಸಿಗುವಂತೆ ಮಾಡಲು ಬ್ಯಾಕ್‌ಲಾಗ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ೩೭೧.ಜೆ ಅನ್ವಯ ಹೈದ್ರಾಬಾದ್ ಕರ್ನಾಟಕಕ್ಕೆ ದೊರೆತಿರುವ ವಿಶೇಷ ಸವಲತ್ತಿನಡಿ, ಮೀಸಲಾತಿ ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು.

೬. ಸ್ಥಳೀಯರಿಗೆ ಕೇವಲ ಕೆಳ ಹಂತದ ಹುದ್ದೆಗಳಿಗಷ್ಟೇ ಮೀಸಲಾತಿ ಇದ್ದರೆ ಕನ್ನಡಿಗರ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ. ಅಧಿಕಾರಿಗಳ ಹಂತದಲ್ಲೂ ಆದ್ಯತೆ ಇರಬೇಕು. ಜಾಹೀರಾತಿನಲ್ಲಿ ಕನ್ನಡ ಬಲ್ಲ 'ಸ್ಥಳೀಯರಿಗೆ ಆದ್ಯತೆ' ಎಂಬ ಅಂಶವನ್ನು ಸೇರಿಸಲು, ಸಂದರ್ಶನದಲ್ಲಿ 'ಸ್ಥಳೀಯ ಭಾಷಾ ಜ್ಞಾನ' ಪರೀಕ್ಷಿಸುವಂತೆ ಆದೇಶಿಸಬೇಕು.

೭. ಅಸಂಘಟಿತ ವಲಯಗಳಾದ ಗಾರ್ಮೆಂಟ್ಸ್, ಹೊಟೇಲ್ ಉದ್ಯಮ, ಗೃಹ, ಗುಡಿ ಕೈಗಾರಿಕೆ, ಸಣ್ಣ ಕೈಗಾರಿಕೆಗಳಲ್ಲಿ ರಾಜ್ಯ ಸರ್ಕಾರಕ್ಕೆ ನಿಯಂತ್ರಣವಿಲ್ಲ. ಇಲ್ಲಿನ ಎಲ್ಲ ನೇಮಕಾತಿಗಳನ್ನು ಕಡ್ಡಾಯವಾಗಿ ನೋಂದಣಿ ಮಾಡುವ ವ್ಯವಸ್ಥೆ ಅನುಷ್ಠಾನಕ್ಕೆ ಬರಬೇಕು. ಬಹಳಷ್ಟು ಕಡೆ ಇಂಗ್ಲಿಷ್ ಮಾತ್ರ ವ್ಯವಹಾರ ಭಾಷೆಯಾಗಿದೆ. ಈ ವಲಯದಲ್ಲಿ ಹೆಚ್ಚು ಶಿಕ್ಷಣವಿಲ್ಲದವರೇ ಉದ್ಯೋಗಿಗಳಾಗಿರುತ್ತಾರೆ. ಭಾಷೆ ತಿಳಿಯದೆ ಶೋಷಣೆ ಹೆಚ್ಚಿದೆ ಅದನ್ನು ತಪ್ಪಿಸಲು ಕಾರ್ಮಿಕರೊಡನೆ ಕಡ್ಡಾಯವಾಗಿ ಕನ್ನಡದಲ್ಲೇ ವ್ಯವಹರಿಸಲು ಸೂಚಿಸಬೇಕು ಮತ್ತು ಸರ್ಕಾರ ಅಸಂಘಟಿತ ವಲಯದಲ್ಲಿ ನಿರಂತರವಾಗಿ ಕನ್ನಡ ಕಲಿಕೆಗೆ ವ್ಯವಸ್ಥೆ ಮಾಡಬೇಕು.

೮. ಎಲ್ಲ ಉದ್ಯಮಗಳಲ್ಲಿ ಶುಶಕ್ಷು (Apprentice)ಗಳನ್ನು ತೆಗೆದುಕೊಳ್ಳುತ್ತಾರೆ. ಮೊದಲು ಉದ್ಯೋಗ ವಿನಿಮಯ ಕೇಂದ್ರದಿಂದ ಆಯ್ಕೆ ನಡೆಯುತ್ತಿದ್ದುದರಿಂದ ಸ್ಥಳೀಯರೇ ಬರುತ್ತಿದ್ದರು. ಈಗ ತಾಂತ್ರಿಕ ಮಂಡಳಿ ಮೂಲಕ ನಡೆಯುತ್ತಿರುವುದರಿಂದ ಹೊರ ರಾಜ್ಯದವರೂ ಬರುತ್ತಿದ್ದಾರೆ. ಇದನ್ನು ತಡೆಯಲು ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ವರೆಗೆ ಓದಿದವರನ್ನು ಮಾತ್ರ ಪರಿಗಣಿಸುವಂತಾಗಬೇಕು.

೯. ಕೇಂದ್ರ ಸರ್ಕಾರ, ಸಾರ್ವಜನಿಕ ವಲಯ, ಖಾಸಗೀ ವಲಯದ ಉದ್ಯಮಗಳಲ್ಲಿ ಕನ್ನಡ ಭಾಷೆಯ ಬಳಕೆಯನ್ನೂ ಕಡ್ಡಾಯಗೊಳಿಸಿ ಅದನ್ನು ನಿಯಮಿತವಾಗಿ ಪರಿಶೀಲಿಸಲು ಕಾರ್ಮಿಕ ಇಲಾಖೆಗೆ ಸೂಚಿಸಬೇಕು ಹಾಗೂ ಕೇಂದ್ರ ಸರ್ಕಾರ ನಡೆಸುವ ಎಲ್ಲ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡದಲ್ಲೂ ಬರೆಯಲು ಅವಕಾಶ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕು.

೧೦. ಕೇಂದ್ರ ಸರ್ಕಾರಿ ಸ್ವಾಮ್ಯದ ಎಲ್ಲ ಉದ್ಯಮ, ಸಂಸ್ಥೆಗಳಲ್ಲಿ ಹಿಂದಿ ಅನುಷ್ಠಾನಗೊಳಿಸಲು 'ಹಿಂದಿ ಕೋಶ'ವಿರುತ್ತದೆ. ಅದು ಹಿಂದಿಯ ಬಳಕೆ, ಪ್ರಚಾರ, ಕಲಿಸಲು ಹೀಗೆ ಎಲ್ಲ ಹಂತಗಳಲ್ಲಿ ಹಿಂದಿಮಯವಾಗಲು ಶ್ರಮಿಸುತ್ತಿದೆ. ಕೇಂದ್ರ ಸರ್ಕಾರ ಯಥೇಚ್ಛವಾಗಿ ಹಣ ಬಿಡುಗಡೆ ಮಾಡುತ್ತಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಾಗೂ ಕನ್ನಡ ಸಂಘಗಳ ಪ್ರಯತ್ನದಿಂದ ಕೆಲವು ಕಡೆ 'ಕನ್ನಡ ಕೋಶ'ವನ್ನು ತೆರೆದಿದ್ದಾರೆ. ಆದರೆ, ಕೇವಲ ಕಾಟಾಚಾರಕ್ಕೆ ಮಾತ್ರ. ತ್ರಿಭಾಷಾ ಸೂತ್ರದನ್ವಯ, ಕನ್ನಡಕ್ಕೂ ಸಮಾನ ಆದ್ಯತೆಯಿರಬೇಕು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಿ ಕಾರ್ಖಾನೆ, ಕಛೇರಿ ಮತ್ತು ಸಂಸ್ಥೆಗಳಿಗೆ ಪತ್ರ ಬರೆದು ಕನ್ನಡ ಅನುಷ್ಠಾನಗೊಳಿಸಲು 'ಕನ್ನಡ ಕೋಶ'ವನ್ನು ಕಡ್ಡಾಯವಾಗಿ ಸ್ಥಾಪಿಸಿ ಸೂಕ್ತ ಸಂಪನ್ಮೂಲವನ್ನು ಕಲ್ಪಿಸಿ ಕನ್ನಡಕ್ಕೆ ಗೌರವಯುತ ಸ್ಥಾನಸಿಗುವಂತೆ ನೋಡಿಕೊಳ್ಳಲು ಸೂಚಿಸಬೇಕು.

೧೧. ಕನ್ನಡ ನಿರುದ್ಯೋಗಿಗಳ ವಿವರಗಳನ್ನು ಸಂಗ್ರಹಿಸಿ ಒಂದು ಪ್ರತ್ಯೇಕ ಅಂತರ್ಜಾಲ ತಾಣವನ್ನು ಸ್ಥಾಪಿಸಿ, ಅದರಲ್ಲಿ ನಿರುದ್ಯೋಗಿಗಳ ವಿವರವನ್ನು ಅಳವಡಿಸಿ, ರಾಜ್ಯದಲ್ಲಿರುವ ಉದ್ಯಮಗಳು ಈ ತಾಣದಿಂದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಸೂಚಿಸಬೇಕು.

೧೨. ಕೆಲವು ಖಾಸಗಿ ಕೈಗಾರಿಕೆಗಳಲ್ಲಿ ರಾಜ್ಯೋತ್ಸವ ನಡೆಸಲು ಅವಕಾಶ ನೀಡುತ್ತಿಲ್ಲ. ಬಹಳಷ್ಟು ಕಡೆ ಕನ್ನಡ ಚಟುವಟಿಕೆ ನಿರಂತರವಾಗಿ ನಡೆಯಲು ಅವಕಾಶವಿಲ್ಲ. ರಾಜ್ಯದಲ್ಲಿರುವ ಎಲ್ಲಾ ಉದ್ಯಮ, ಸಂಸ್ಥೆ, ಕಚೇರಿಗಳಲ್ಲಿ ರಾಜ್ಯೋತ್ಸವ ಆಚರಣೆ, ಕನ್ನಡ ಚಟುವಟಿಕೆಗಳಿಗೆ ಅವಕಾಶವಿರುವಂತೆ ಸುತ್ತೋಲೆ ಹೊರಡಿಸಬೇಕು.

೧೩. ಬ್ಯಾಂಕ್, ರೈಲ್ವೇ, ಸ್ಟಾಫ್ ಸೆಲೆಕ್ಷನ್ ಕಮಿಷನ್ ಮುಂತಾದ ಕಡೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಿಗರಿಗೆ ಸೂಕ್ತ ತರಬೇತಿಯಿಲ್ಲದೇ ಅವಕಾಶವಂಚಿತರಾಗುತ್ತಿದ್ದಾರೆ. ಕೇರಳ, ಬಿಹಾರ, ಆಂಧ್ರ ಮುಂತಾದ ರಾಜ್ಯಗಳಲ್ಲಿ ಇಂತಹ ಪರೀಕ್ಷೆಗಳಿಗೆ ತರಬೇತಿ ನೀಡಲು ಸಾಕಷ್ಟು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿವೆ. ಕರ್ನಾಟಕದಲ್ಲೂ ಅಂತಹ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಬೇಕು. ಸಂದರ್ಶನ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕೆಂಬ ಪಠ್ಯಕ್ರಮವನ್ನು ಪಿ.ಯು.ಸಿ. ಪಠ್ಯದಲ್ಲಿ ಅಳವಡಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು.

೧೪. ಕನ್ನಡಿಗರಲ್ಲಿ ಉದ್ಯಮಶೀಲತೆ ಬೆಳೆಸಲು ತರಬೇತಿ ನೀಡಲು ಒಂದು ವ್ಯವಸ್ಥೆಯಾಗಬೇಕು. ರಾಜ್ಯದಲ್ಲಿ ಉದ್ಯಮ ಸ್ಥಾಪಿಸಲು ಮುಂದೆ ಬರುವ ಕನ್ನಡಿಗರಿಗೆ ಎಲ್ಲ ಹಂತಗಳಲ್ಲಿ ಮಾರ್ಗದರ್ಶನ ಮಾಡಲು, 'ಉದ್ಯೋಗ ಮಿತ್ರ'ದ ಪ್ರತ್ಯೇಕ ಘಟಕ ಅಸ್ತಿತ್ವಕ್ಕೆ ಬರಬೇಕು. ಕಡಿಮೆ ದರದಲ್ಲಿ ಸಾಲ ನೀಡುವ ಮತ್ತು ಉತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸುವ ಪ್ರಯತ್ನ ಮಾಡಬೇಕು.

೧೫. ಐ.ಟಿ, ಬಿ.ಟಿ, ಬಹುರಾಷ್ಟ್ರೀಯ ಕಂಪನಿಗಳು, ನಿರ್ಮಾಣ ವಲಯಗಳಿಗೆ ಸರ್ಕಾರ ಸಾಕಷ್ಟು ಸವಲತ್ತು ನೀಡುತ್ತಿದೆ. ರಿಯಾಯಿತಿ ದರದಲ್ಲಿ ಜಮೀನು, ತೆರಿಗೆ ವಿನಾಯಿತಿ, ರಿಯಾಯಿತಿ ವಿದ್ಯುತ್ ಮುಂತಾದ ಸೌಲಭ್ಯಗಳನ್ನು ನೀಡುತ್ತಿದೆ. ಸರ್ಕಾರ ನಿಯಮಿತವಾಗಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸುತ್ತಿದೆ. ರಾಜ್ಯ ಸರ್ಕಾರವು ಒಡಂಬಡಿಕೆ/ಒಪ್ಪಂದ ಮಾಡಿಕೊಳ್ಳವಾಗಲೇ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ಮತ್ತು ಕನ್ನಡಕ್ಕೆ ಮಾನ್ಯತೆಯಿರಬೇಕೆಂಬ ಷರತ್ತನ್ನು ವಿಧಿಸಬೇಕು. ಈಗಾಗಲೇ ಆಗಿರುವ ಒಪ್ಪಂದಗಳಿಗೆ ಈ ಷರತ್ತನ್ನು ವಿಧಿಸಿರದಿದ್ದರೆ ಪೂರ್ವಾನ್ವಯವಾಗುವಂತೆ ರಾಜ್ಯ ಸರ್ಕಾರದ ಆದೇಶವನ್ನು ಹೊರಡಿಸಬೇಕು.

**ಡಾ. ಮುಖ್ಯಮಂತ್ರಿ ಚಂದ್ರು**
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಮತ್ತು ಕನ್ನಡ ಕಾರ್ಮಿಕರ ಸಮಾವೇಶ ಸಮಿತಿ.

ಸ್ಥಳ: ಬೆಂಗಳೂರು
ದಿನಾಂಕ : ೨೭-೧೦-೨೦೧೩